## ಲಾಲಿಪಾಪು ಚೀಪು ಚೀಪು




ತುಸು ಪೋಲಿ, ನಗಿಸುವ ಖಯಾಲಿ, ಕೆಣಕುವ ಕಿಡಿಗೇಡಿತನ, ಚುಚ್ಚುವ ಹರಿತಗುಣ ಇವೆಲ್ಲ ಗುಣಗಳಿಂದ ನಳನಳಿಸುವ ಹನಿಗವನಗಳ ಮೂಲಕ ಕನ್ನಡಿಗರಿಗೆ ಚಿರಪರಿಚಿತರು ಎಚ್. ಡುಂಡಿರಾಜ್. ಈಗ ತಮ್ಮೆಲ್ಲ ಹಳೆಯ ವಿಶೇಷಣಗಳನ್ನು ತುಸು ಹಿಂದೆ ಮಾಡಿಕೊಂಡು, ಕೈತುಂಬ ಪದ್ಯಗಳ ಲಾಲಿಪಾಪು ಹಿಡಿದುಕೊಂಡು ಪುಟಾಣಿಗಳಿಗೆ ಹಂಚಲು ಹೊರಟಿದ್ದಾರೆ ಡುಂಡಿ ಮಾಮ. ಮಾಮನ ಜೋಬಿನಲ್ಲಿ ಮಕ್ಕಳು ಮನದಣಿಯೆ ಚೀಪಬಹುದಾದಷ್ಟು ಪದ್ಯಗಳ ಪೆಪ್ಪರ್‌ಮೆಂಟುಗಳಿವೆ. ಅವು ನೋಡಲು ಆಕರ್ಷಕವಷ್ಟೇ ಅಲ್ಲ, ಆರೋಗ್ಯಕ್ಕೂ ಹಿತಕಾರಿಯಾಗುವಂತಿವೆ.

ಇಲ್ಲಿನ ಪದ್ಯಗಳು ಪದಗಳಲ್ಲಿಯೇ ಆಟ ಆಡುತ್ತವೆ; ಜೊತೆಗೆ ಅ ಆ ಇ ಈಯನ್ನೂ ಕಲಿಸುತ್ತವೆ. ಒಂದರಿಂದ ಹತ್ತನ್ನು ಹೇಳಿಕೊಡುವಷ್ಟೇ ಸಲೀಸಾಗಿ ಎರಡಕ್ಕೆ ಎರಡು ಸೇರಿ ನಾಲ್ಕು ಎಂಬುದನ್ನೂ ಮಲ್ಲಿಗೆ ಇಡ್ಲಿಯಷ್ಟೇ ಮೃದುವಾಗಿ ಹೇಳಿಕೊಡುತ್ತವೆ. 'ಹೇಳಿಕೊಡುವ' ಪದ್ಯಗಳು ಒಂದೆಡೆಯಾದರೆ, ಅದರ ಗೊಡವೆಯೇ ಇರದೆ ಮಕ್ಕಳಿಗೆ ಹೇಳಿಕೊಳ್ಳುವುದರಲ್ಲಿಯೇ ಮಜಾ ಕೊಡುವ ಪದ್ಯಗಳೂ ಇಲ್ಲಿ ಸಾಕಷ್ಟಿವೆ. ಲಾಲಿ ಪಾಪು ಸ್ಯಾಂಪಲ್ಲು ಇಲ್ಲಿದೆ, ರುಚಿ ನೋಡಿ:

'ಹುಡುಕಿಕೊಟ್ಟು ಸುಸ್ತಾದ ಅಜ್ಜಿ  
ಹೇಳಿದಳು – ಇನ್ನು ಆಗಲ್ಲ  
ನೀವು ಕೇಳಿದ್ದೆಲ್ಲ ಹುಡುಕಲಿಕ್ಕೆ  
ಸ್ವಾಮೀ ನಾನು ಗೂಗಲ್ಲಾ?'

**ಲಾಲಿ ಪಾಪು ಚೀಪು ಚೀಪು; ಲೇ: ಎಚ್. ಡುಂಡಿರಾಜ್; ಬೆ: ₹80;**
**ಪ್ರ: ತೇಜು ಪಬ್ಲಿಕೇಷನ್ಸ್. ದೂ: 9900195626**

---

## ಸಾರಮತಿ




ಸಾಹಿತ್ಯದ ಓದು, ಸಂಗೀತದಲ್ಲಿ ಪರಿಶ್ರಮ, ಬರವಣಿಗೆಯ ಕೌಶಲ – ಈ ಮೂರೂ ಅಂಶಗಳು ಸೇರುವ ಕೂಡುತಾಣದಲ್ಲಿ ಸಾಯಿಗಣೇಶ್ ಎನ್.ಪಿ. ಅವರ ಈ ಕೃತಿ ರೂಪುತಳೆದಿದೆ. ಮೊದಲ ಪುಟ ಓದಿದಾಗಲೇ ಇದು ಹೊರಗಿನ ನೋಟ ಅಲ್ಲ; ಸಂಗೀತ ಪರಂಪರೆಯ ಒಳಗೆ, ಅದರ ಭಾಗವಾಗಿಯೇ ಚಲಿಸುತ್ತ ಕಂಡ ಹೊಳಹುಗಳು ಎಂಬುದು ಸ್ಪಷ್ಟವಾಗುತ್ತವೆ. ಹಾಗೆಂದು ಸಾಯಿಗಣೇಶ್ ಪರಂಪರೆಯಿಂದ ಬಂದಿರುವುದನ್ನು ಕಣ್ಣಿಗೊತ್ತಿಗೊಂಡು ಮೈಮರೆಯುವವರೂ ಅಲ್ಲ. ಅದನ್ನು ಪ್ರಶ್ನಿಸುವ, ಪರಂಪರೆಯ ಗಡಿಗಳನ್ನು ವಿಸ್ತರಿಸಿದವರ ಪ್ರಯತ್ನಗಳನ್ನು ಸಾವಧಾನದಿಂದ ಗಮನಿಸುವ ಪ್ರಯತ್ನ ಇಲ್ಲಿನ ಬರಹಗಳಲ್ಲಿದೆ. ಆದರೆ ಅದರ ಹಿಂದಿರುವ ಉದ್ದೇಶ ಪರಂಪರೆಯನ್ನು ಅರ್ಥಮಾಡಿಕೊಳ್ಳುವುದೇ ಹೊರತು ಮೂರ್ತಿಭಂಜನೆಯ ವಿಘ್ನಸಂತೋಷವಲ್ಲ ಎಂಬುದನ್ನು ಗಮನಿಸಬೇಕು. ಹಾಗಾಗಿಯೇ ಸಂಗೀತ ವ್ಯಾಕರಣದ ಹಲವು ತಾಂತ್ರಿಕ ಸಂಗತಿಗಳನ್ನು ಅವರು ಉಲ್ಲೇಖಿಸುವಾಗಲೂ ಅದು ಪಾಂಡಿತ್ಯ ಪ್ರದರ್ಶನದ ಅಹಂಕಾರ ಆಗದ ಹಾಗೆ ಎಚ್ಚರವಹಿಸುತ್ತಾರೆ.

ಅನುರಣನ, ಅವಲೋಕನ, ಆಲೋಚನ ಎಂಬ ಮೂರು ಭಾಗಗಳಲ್ಲಿ ಈ ಲೇಖನಗಳು ವಿಂಗಡಿತಗೊಂಡಿವೆ. ಮೊದಲ ಭಾಗದಲ್ಲಿ ಎಲ್. ವಸಂತಕುಮಾರಿ ಮತ್ತು ಬಾಲಮುರಳಿಕೃಷ್ಣ ಕುರಿತಾದ ಲೇಖನಗಳಿವೆ. ಅವಲೋಕನ ವಿಭಾಗದಲ್ಲಿ ತ್ಯಾಗರಾಜರ ಬದುಕು, ಕೃತಿಗಳು, ಮೈಸೂರು ಸದಾಶಿವರಾಯರ ಕುರಿತಾದ ಲೇಖನಗಳಿವೆ. ಆಲೋಚನ ವಿಭಾಗದಲ್ಲಿ ಸಂಗೀತ ತತ್ವ, ಸಂಪ್ರದಾಯ, ಇತಿಹಾಸಗಳ ಕುರಿತಾದ ಜಿಜ್ಞಾಸೆ ಇರುವ ಲೇಖನಗಳಿವೆ.

**ಸಾರಮತಿ; ಲೇ: ಸಾಯಿಗಣೇಶ್ ಎನ್.ಪಿ.; ಬೆ: ₹150; ಪ್ರ: ಶ್ರಾವಣ ಪ್ರಕಾಶನ ದೂ: 9972032155**